1444(230) ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಏಪ್ರಿಲ್–2004 ರಿಂದ ಇಲ್ಲಿಯವರೆಗೆ ಬೆಂಗಳೂರಿನ. ಕಬ್ಬನ್ ಉದ್ಯಾನವನದಲ್ಲಿ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳ ವಿವರ ನೀಡುವುದು;

ಆ) ಇದಕ್ಕಾಗಿ ಇಲ್ಲಿಯವರೆಗೆ ಖರ್ಚಾಗಿರುವ ಹಣವೆಷ್ಟು;

ಇ) ಈ ಉದ್ಯಾನವನ್ನು ಇನ್ನೂ ಹೆಚ್ಚು ಆಕರ್ಷಣೀಯವಾಗಿ ಮಾಡಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು;

ಈ) ಉದ್ಯಾನವನದಲ್ಲಿ ಪ್ರವಾಸಿಗರಿಗೆ ಹೆಚ್ಚಿನ ರಕ್ಷಣೆ ಒದಗಿಸಲು ಕೈಗೊಂಡ ಕ್ರಮಗಳೇನು?

ಶ್ರೀ ಆರ್.ಶ್ರೀನಿವಾಸ (ತೋಟಗಾರಿಕೆ ಸಚಿವರು):

ಅ) ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ:

1. ರಿಂಗ್‌ವುಡ್ ವೃತ್ತದ ಬಳಿ ತ್ರಿಭುಜಕಾರದ ಉದ್ಯಾನದ ಅಭಿವೃದ್ಧಿ.
2. ವಿಧಾನಸೌಧದ ಜೋಡಿ ರಸ್ತೆಯ ಎಡಭಾಗದ ಹೈಕೋರ್ಟ್ ಮುಂಭಾಗದ ಉದ್ಯಾನವನ್ನು ಅಭಿವೃದ್ಧಿ.
3. ಸೆಂಚುರಿ ಕ್ಲಬ್‌ನ ಎಡ ಮತ್ತು ಬಲ ಭಾಗದಲ್ಲಿ ಲಾನ್ ಅಭಿವೃದ್ಧಿ.
4. ಕಾರಂಜಿಗಳೂ, ಕಾಬಾಲ್ ಸ್ಟೋನ್‌ಗಳು ಮತ್ತು ಗಾರ್ಡನ್ ಬೆಂಚುಗಳಿಗೆ ಬಣ್ಣ ಬಳಿಸುವುದು.
5. ಗಿಡಮರಗಳಿಗೆ ನಾಮಫಲಕವನ್ನು ಹಾಕುವುದು.
6. ಕ್ಯಾನಾ ಬೆಡ್‌ಗಳ ಅಭಿವೃದ್ಧಿ.
7. ಬ್ಯಾಂಡ್ ಸ್ಟ್ಯಾಂಡ್ ಹತ್ತಿರ ಟೆರೆಸ್ ಗಾರ್ಡನ್ ಅಭಿವೃದ್ಧಿ.
8. ರಾಣಿ ಪಾರ್ಕ್ ಅಭಿವೃದ್ಧಿ.

ಆ) 2004–05ನೇ ಸಾಲಿನಲ್ಲಿ ಇಲ್ಲಿಯವರೆಗೆ ಒಟ್ಟು ರೂ.8.89 ಲಕ್ಷಗಳನ್ನು ಬಳಸಲಾಗಿದೆ.

ಇ) ಕಬ್ಬನ್ ಉದ್ಯಾನವನವನ್ನು ಇನ್ನೂ ಹೆಚ್ಚು ಆಕರ್ಷಣೀಯವಾಗಿ ಮಾಡಲು ಸರ್ಕಾರವು ಈ ಕೆಳಂಡ ಕಾರ್ಯಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿಲಾಗಿದೆ.

1. ಹುಲ್ಲು ಹಾಸುಗಳ ನವೀಕರಣ.
2. ತುಂತುರು ನೀರಾವರಿ ಅಳವಡಿಕೆ.
3. ಹೊಸ ಜಾತಿಯ ತಳಿಗಳ ಅಲಂಕಾರಿಕ ಗಿಡಗಳನ್ನು ಪರಿಚಯಿಸುವುದು.
4. ಅಲಂಕಾರಿಕ ಗ್ರೀಲ್‌ಗಳನ್ನು ಅಳವಡಿಸುವುದು.
5. ಹೊಸದಾಗಿಗಾರ್ಡನ್ ಬೆಂಚುಗಳನ್ನು ಅಳವಡಿಸುವುದು.
6. ಹೊಸದಾಗಿ ಕಾರಂಜಿಗಳನ್ನು ನಿರ್ಮಾಣ ಮಾಡುವುದು.
7. ಪಕ್ಷಿಗಳ ತಾಂತ್ರಿಕ ಮಾಹಿತಿಗಳ ನಾಮಫಲಕಗಳನ್ನು ಹಾಕುವುದು.
8. ಜಾಗಿಂಗ್ ಪಾತ್ ನಿರ್ಮಾಣ ಮಾಡುವುದು ಇತ್ಯಾದಿ.

ಈ) ಕಬ್ಬನ್ ಉದ್ಯಾನವನಕ್ಕೆ ಭೇಟಿ ನೀಡುವ ಪ್ರವಾಸಿಗರಿಗೆ ರಕ್ಷಣೆ ಒದಗಿಸಲು ಖಾಸಗಿ ಸೆಕ್ಯೂರಿಟಿ, ಪೋಲಿಸ್ ಇಲಾಖೆಯಿಂದ Horse ಪೋಲಿಸು, Mounted Bicycle mounted ಪೋಲಿಸ್ ದಳಗಳ ಪಹರೆಗಳನ್ನು ಹಾಕಲಾಗಿದೆ.